ಸಂಖ್ಯೆ:ಸಿಬ್ಬಂದಿ-1/31/2019-20
ಒಬಿ:/48:2020

ಪೊಲೀಸ್ ಅಧೀಕ್ಷಕರವರ ಕಛೇರಿ,
ಮೈಸೂರು ಜಿಲ್ಲೆ,
ಮೈಸೂರು. ದಿನಾಂಕ 18.05.2020

(4)

## ತಾತ್ಕಾಲಿಕ ಆಯ್ಕೆಪಟ್ಟಿ

ವಿಷಯ:- ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳ ತಾತ್ಕಾಲಿಕ ಆಯ್ಕೆಪಟ್ಟಿ ಪ್ರಕಟಿಸುವ ಕುರಿತು.

ಉಲ್ಲೇಖ:- 1. ಅಧಿಸೂಚನೆ ಸಂಖ್ಯೆ : 08/ನೇಮಕಾತಿ-4/2019-20 ದಿನಾಂಕ 10.10.2019
2. ಮಾನ್ಯ ಡಿಜಿ & ಐಜಿಪಿ ರವರ ಸುತ್ತೋಲೆ ಸಂಖ್ಯೆ : 221/ಸಿಬ್ಬಂದಿ-1/ 2018-19 ದಿನಾಂಕ 26.02.2020
3. ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ನೇಮಕಾತಿ ಬೆಂಗಳೂರು ರವರ ಕಛೇರಿ ಜ್ಞಾಪನ ಸಂಖ್ಯೆ: 08/ನೇಮಕಾತಿ-4/2019-20 ದಿನಾಂಕ 07.05.2020
4 ಸರ್ಕಾರದ ಅಧಿಸೂಚನೆ ಸಂಖ್ಯೆ:ಹೆಚ್‌ಡಿ 162 ಪೊಸಿಅ 2003, ದಿನಾಂಕ: 23-12-2004
5. ಕರ್ನಾಟಕ ರಾಜ್ಯ ಪೊಲೀಸ್ ಲಿಪಿಕ ಸೇವೆಗಳು ಸೇರಿದಂತೆ (ನೇಮಕಾತಿ) ನಿಯಮಗಳು 2004 ಮತ್ತು 2016 ನಿಯಮಗಳು, ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಾವಳಿ 1977 ಹಾಗೂ ಸದರಿ ನಿಯಮಗಳಿಗೆ ಕಾಲ ಕಾಲಕ್ಕೆ ಆಗುವ ತಿದ್ದುಪಡಿಗಳು.
6 ನೇಮಕಾತಿ ಸಮಿತಿ ಸಭೆ ದಿನಾಂಕ 13.05.2020

* * *

ಮೈಸೂರು ಜಿಲ್ಲೆಯಲ್ಲಿ ಖಾಲಿ ಇದ್ದ 50 ಎಪಿಸಿ ಹುದ್ದೆಗಳಿಗೆ ಉಲ್ಲೇಖ-1 ರ ಅಧಿಸೂಚನೆ ಪ್ರಕಾರ ಅರ್ಜಿಗಳನ್ನು ಆಹ್ವಾನಿಸಿ, ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳಿಗೆ ದಿನಾಂಕ: 01-12-2019 ರಂದು ಬೆಳಗ್ಗೆ 11.00 ಗಂಟೆಯಿಂದ 12.30 ಗಂಟೆಯವರೆಗೆ ವಿವಿಧ ಪರೀಕ್ಷಾ ಕೇಂದ್ರಗಳಲ್ಲಿ ಲಿಖಿತ ಪರೀಕ್ಷೆಯನ್ನು ನಡೆಸಲಾಗಿರುತ್ತದೆ. ಲಿಖಿತ ಪರೀಕ್ಷೆಗೆ ಹಾಜರಾದ ಅಭ್ಯರ್ಥಿಗಳಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ಅರ್ಹ 1:5 ಅನುಪಾತದಲ್ಲಿ ದೇಹದಾರ್ಢ್ಯತೆ ಮತ್ತು ಸಹಿಷ್ಣುತೆ (PST / ET) ಪರೀಕ್ಷೆಯನ್ನು ದಿನಾಂಕ 17.03.2020ರಂದು ನಡೆಸಲಾಗಿರುತ್ತದೆ.

ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು, ನೇಮಕಾತಿ ಬೆಂಗಳೂರು ರವರ ಸುತ್ತೋಲೆ ಸಂಖ್ಯೆ : : 08/ನೇಮಕಾತಿ-4/2019-20 ದಿನಾಂಕ 07.05.2020ರಲ್ಲಿ ಪಿಎಸ್‌ಟಿ/ಇಟಿ ಪರೀಕ್ಷೆಯಲ್ಲಿ ಅರ್ಹರಾದ ಅಭ್ಯರ್ಥಿಗಳಲ್ಲಿ ನೇರ ಮತ್ತು ಸಮತಲ ವರ್ಗೀಕರಣ ಹಾಗೂ ನಿಯಮಗಳನ್ವಯ 1:1ರ ಅನುಪಾತದಲ್ಲಿ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ತಯಾರಿಸಿ, ಈ ಕಛೇರಿಗೆ ಕಳುಹಿಸಿಕೊಟ್ಟಿರುತ್ತಾರೆ. ಸದರಿ ಪಟ್ಟಿಯನ್ವಯ ಮೈಸೂರು ಜಿಲ್ಲಾ ಘಟಕದ ತಾತ್ಕಾಲಿಕ ಆಯ್ಕೆಪಟ್ಟಿಯನ್ನು ಕೆಳಕಂಡ ಷರತ್ತುಗಳಿಗೆ ಒಳಪಟ್ಟಂತೆ ಪ್ರಕಟಿಸಲಾಗಿದೆ.

1. ವೈದ್ಯಕೀಯ ಮಂಡಳಿ ಮುಖಾಂತರ ನಡೆಸಲಾಗುವ ವೈದ್ಯಕೀಯ ಪರೀಕ್ಷೆಯಲ್ಲಿ ಅಭ್ಯರ್ಥಿಗಳು ಅನರ್ಹರಾದಲ್ಲಿ, ಅನರ್ಹರಾದ ಅಭ್ಯರ್ಥಿಗಳನ್ನು ಮುಂದಿನ ಹಂತಕ್ಕೆ ಪರಿಗಣಿಸಲಾಗುವುದಿಲ್ಲ.